ಈ ವಾದದಲ್ಲಿ ಬೌದ್ಧತತ್ತ್ವವನ್ನು ನಿರಾಕರಿಸದೆ ವೇದಾಂತ ದೃಷ್ಟಿಯಿಂದ ಅದನ್ನು ವಿಸ್ತರಿಸುವ ಪ್ರಯತ್ನವನ್ನು ಸ್ವಾಮಿ ವಿವೇಕಾನಂದರು ಮಾಡುತ್ತಾರೆ. ಹೀಗೆ ಬೌದ್ಧಧರ್ಮ ಮತ್ತು ಹಿಂದೂ ಧರ್ಮ ಒಂದಕ್ಕೊಂದು ಪೂರಕವಾಗಿರಬಲ್ಲವು ಎಂದು ಅವರು ವಿವರಿಸುತ್ತಾರೆ. ಮುಂದುವರೆದು ಹೇಳುತ್ತಾರೆ, "ಬೌದ್ಧ ಧರ್ಮವನ್ನುಳಿದು ಹಿಂದೂ ಧರ್ಮವಾಗಲಿ ಅಥವಾ ಹಿಂದೂ ಧರ್ಮವನ್ನುಳಿದು ಬೌದ್ಧ ಧರ್ಮವಾಗಲಿ ಉಳಿಯಲು ಸಾಧ್ಯವಿಲ್ಲ." ಮತ್ತೆ ಹೇಳುತ್ತಾರೆ, "ಬುದ್ಧ ವೇದಾಂತವನ್ನು ಬೆಳಕಿಗೆ ತಂದು ಜನಗಳಿಗೆ ಒದಗಿಸಿದ. ಆ ಮೂಲಕ ಭಾರತವನ್ನು ರಕ್ಷಿಸಿದ."

ಬುದ್ಧನ ವೈಚಾರಿಕ ಸ್ಪಷ್ಟತೆ, ವಾಸ್ತವವನ್ನು ಮಾತ್ರ ಕಾಣುವ ವಿವೇಕ, ಅತೀತವನ್ನು ನಿರಾಕರಿಸುವ ದೃಢತೆ – ಇವು ಸ್ವಾಮೀಜಿಯವರಿಗೆ ಬಹಳ ಹಿಡಿಸಿತ್ತು. ಚರಿತ್ರೆಯ ಏಕಮಾತ್ರ ಪೂಜನೀಯ ವ್ಯಕ್ತಿ ಎಂದರೆ ಬುದ್ಧ ಎನ್ನುತ್ತಿದ್ದರು ಸ್ವಾಮೀಜಿ. ದುಃಖಭೂಯಿಷ್ಠವಾದ ಈ ಜಗತ್ತಿನಲ್ಲಿ ಬಿಡುಗಡೆಯ ಸಾಧ್ಯತೆಗಳನ್ನು ವಾಸ್ತವದ ನೆಲೆಗಳಲ್ಲಿ ಮಾತ್ರ ಹುಡುಕಿ ತೆಗೆದ ಬುದ್ಧನನ್ನು ಸ್ವಾಮೀಜಿ ಬಹಳವಾಗಿ ಪ್ರೀತಿಸುತ್ತಿದ್ದರು.

ಶಾಶ್ವತವಾದ 'ನಾನು' ಎಂಬುದು ಇಲ್ಲದ ಈ ಬೌದ್ಧ ಪ್ರಪಂಚದಲ್ಲಿ, ಎಂದರೆ ಕರ್ತೃ ಇಲ್ಲದೆ ಕರ್ತೃತ್ವ ಸಾಧ್ಯವಾಗುವ ಈ ಜಗತ್ತಿನಲ್ಲಿ, ಬುದ್ಧ ಬೋಧಿಸುವ ನಿರ್ವಾಣ ಅಥವಾ ಬಿಡುಗಡೆ ಯಾರಿಗೆ ಅನ್ವಯಿಸುತ್ತದೆ ಎಂಬುದು ದೊಡ್ಡ ಪ್ರಶ್ನೆ. ಬುದ್ಧನ ನಿರ್ವಾಣ ಎಂಬುದು ವಾರಸುದಾರರೇ ಇಲ್ಲದ ದೊಡ್ಡ ಆಸ್ತಿಯ ಹಾಗೆ ಕಾಣುತ್ತದೆ. "ಬುದ್ಧನ ಅನೇಕ ಸಿದ್ಧಾಂತಗಳನ್ನು ನಾನು ಒಪ್ಪುವುದಿಲ್ಲ, ಹಿಂದೂಗಳ ಹಳೆಯ ವೇದಾಂತ ಇದಕ್ಕಿಂತಲೂ ಮಹತ್ವದ ಸಿದ್ಧಾಂತ" ಎನ್ನುತ್ತಾರೆ ಸ್ವಾಮೀಜಿ.

## ಸಾಂಖ್ಯವಾದ ಮತ್ತು ಸ್ವಾಮಿ ವಿವೇಕಾನಂದರು

ಭಾರತೀಯ ತತ್ತ್ವಶಾಸ್ತ್ರದ ಆರು ಪ್ರಮುಖ ಶಾಖೆಗಳಲ್ಲಿ ಸಾಂಖ್ಯವೂ ಒಂದು. ಈ ಆರು ಶಾಖೆಗಳಲ್ಲಿ ಕೇವಲ ಎರಡು ಮಾತ್ರ ದೇವರ ಪರಿಕಲ್ಪನೆಯನ್ನಾಧರಿಸಿವೆ. ಉಳಿದ ನಾಲ್ಕು ಶಾಖೆಗಳು ದೇವರನ್ನು ಆಶ್ರಯಿಸದೆ ತಮ್ಮ ತತ್ತ್ವಸಿದ್ಧಾಂತವನ್ನು ಪ್ರತಿಪಾದಿಸುತ್ತವೆ. ಸಾಂಖ್ಯವಾದವು ಅಸ್ತಿತ್ವದ ವಿದ್ಯಮಾನವನ್ನು ವಿವರಿಸಲು ದೇವರ ಕಲ್ಪನೆಯನ್ನು ಆಶ್ರಯಿಸುವುದಿಲ್ಲ. ಸ್ವಾಮಿ ವಿವೇಕಾನಂದರು ಸಾಂಖ್ಯವಾದದ ಕಪಿಲ ಮಹರ್ಷಿಯನ್ನು ಅದ್ಭುತವಾದ ಮನಶ್ಶಾಸ್ತ್ರಜ್ಞನೆಂದೂ, ಮನಶ್ಶಾಸ್ತ್ರದ ಪಿತಾಮಹನೆಂದೂ ಕರೆಯುತ್ತಾರೆ. ಸಾಂಖ್ಯವಾದವು ಅತ್ಯಂತ ಪ್ರಾಚೀನ ಸಿದ್ಧಾಂತವಾಗಿರುವುದಲ್ಲದೆ ದೇವರ ಕಲ್ಪನೆಯನ್ನು ಅವಲಂಬಿಸದೆ ಇರುವುದರಿಂದ ಇದೊಂದು ನಾಸ್ತಿಕ ಸಿದ್ಧಾಂತವೆಂದೂ, ಆದ್ದರಿಂದ ಇದನ್ನು ಧ್ವಂಸ ಮಾಡುವ ಅನೇಕ ಪ್ರಯತ್ನಗಳು ತತ್ತ್ವಶಾಸ್ತ್ರದ ಚರಿತ್ರೆಯಲ್ಲಿ ಕಂಡುಬರುತ್ತವೆಂದೂ ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರು ಅಭಿಪ್ರಾಯಪಡುತ್ತಾರೆ. ಸ್ವಾಮಿ ವಿವೇಕಾನಂದರು ಸಾಂಖ್ಯವನ್ನು ಅದ್ಭುತವಾಗಿ ಅರ್ಥೈಸುತ್ತಾರೆ; ಅದರ ಕೊರತೆಗಳನ್ನು ವೇದಾಂತದಿಂದ ತುಂಬಬಹುದು ಎನ್ನುತ್ತಾರೆ. "ನಾನು ಯಾವುದನ್ನೂ ನಾಶ ಮಾಡಲು ಬಂದಿಲ್ಲ; ಎಲ್ಲವನ್ನೂ ಪೂರ್ಣಗೊಳಿಸಲು ಬಂದಿದ್ದೇನೆ" ಎನ್ನುವ ಅವರ ಆಶ್ವಾಸನೆ ಅವರು ತೆಗೆದುಕೊಳ್ಳುವ ಪ್ರತಿಯೊಂದು ನಿಲುವಿನಲ್ಲೂ ಸ್ಪಷ್ಟವಾಗುತ್ತ ಹೋಗುತ್ತದೆ.

ವ್ಯಕ್ತ ಪ್ರಪಂಚದಲ್ಲಿ ಕಂಡುಬರುವ, ಕಣ್ಣಿಗೆ ಕಾಣುವ – ಕಾಣದ ಸಕಲ ವಿದ್ಯಮಾನಗಳೂ 'ಪ್ರಕೃತಿ' ವಿಕಾಸವಾಗುವ ಬಗೆ ಎಂದು ಸಾಂಖ್ಯರು ವಿವರಿಸುತ್ತಾರೆ. ಈ ಪ್ರಕೃತಿಯು ಚೇತನರಹಿತವಾದರೂ ಇದರ ಅಭಿವ್ಯಕ್ತಿಗೆ ಅಲೌಕಿಕವಾದ ಯಾವುದೊಂದೂ ಅಗತ್ಯವಿಲ್ಲ ಎನ್ನುವ ಮೂಲಕ ಸಾಂಖ್ಯವು ದೇವರನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಯಾವ ಕಾರಣದಿಂದ ಈ ಪ್ರಕೃತಿ ವ್ಯಕ್ತವಾಯಿತೋ, ಆ ಮೂಲ ಕಾರಣಕ್ಕೂ ಮತ್ತು ಈ ಜಗತ್ತಿಗೂ ಯಾವುದೇ ವ್ಯತ್ಯಾಸವಿಲ್ಲ. ಮಣ್ಣಿನಿಂದ ಮಡಕೆ ಉಂಟಾಗುತ್ತದೆ, ಆದರೆ ಮಡಕೆಯಲ್ಲಿರುವುದು ಮಣ್ಣೇ ಹೊರತು ಬೇರೆಯಲ್ಲ. ಆದ್ದರಿಂದ ಈ ಎರಡರಲ್ಲೂ ಮೂಲಭೂತವಾದ ವ್ಯತ್ಯಾಸವಿಲ್ಲ. ಸಾಂಖ್ಯರ ಪ್ರಕಾರ ಬುದ್ಧಿ–ಮನಸ್ಸುಗಳು ಭೌತಿಕ ಘಟಕಗಳು. ಅಷ್ಟೇ ಏಕೆ, ದೇಶ–ಕಾಲಗಳು ಕೂಡ ಭೌತಿಕ ಘಟಕಗಳು. ಸಾಮಾನ್ಯವಾಗಿ ನಾವು ಭಾವಿಸುವುದು ಏನೆಂದರೆ, ವಸ್ತುವು ದೇಶಕಾಲದ ಒಳಗಿದೆ ಎಂದು. ದೇಶ ಕಾಲಗಳು ನಿರಪೇಕ್ಷವಾದವು ಎಂದು ನ್ಯೂಟನ್ ಭಾವಿಸಿದ್ದ. ಆದರೆ ಸಾಂಖ್ಯರು ವಸ್ತು–ದೇಶ–ಕಾಲಗಳನ್ನು ಒಂದೇ ಸಾಲಿನಲ್ಲಿಟ್ಟು ಇವುಗಳು ಸಮಾನವಾದ ಸಾಪೇಕ್ಷ ಘಟಕಗಳು; ದೇಶ ಕಾಲವು ವಸ್ತುವಿನೊಳಗಿದೆ ಎಂದು ಪರಿಗಣಿಸುತ್ತಾರೆ. ಭೌತಶಾಸ್ತ್ರದ ಚರಿತ್ರೆಯಲ್ಲಿ ಐನ್‌ಸ್ಟೈನ್ ಬರುವವರೆಗೂ ದೇಶಕಾಲಗಳನ್ನು ಸಾಪೇಕ್ಷವಾದ ಘಟಕಗಳು ಎಂದು ಹೇಳುವ ಧೈರ್ಯ ಮನುಕುಲಕ್ಕೆ ಬಂದಿರಲಿಲ್ಲ.

ಸಾಂಖ್ಯರು 'ಪ್ರಕೃತಿ'ಯ ಪ್ರತಿಯೊಂದನ್ನೂ ವಸ್ತುನಿತ್ಯತ್ವ ನಿಯಮಕ್ಕೆ (Law of Conservation of Matter) ಒಳಪಡಿಸುತ್ತಾರೆ. ವಸ್ತುಗಳು ಬದಲಾಗಬಲ್ಲವೇ ಹೊರತು ನಾಶವಾಗಿ ಹೋಗುವುದಿಲ್ಲ. ಜಡ ಪ್ರಕೃತಿಯ ವಸ್ತುಗಳು ಸಹ ನಾಶವಾಗುವುದಿಲ್ಲ ಎಂಬ ಸಾಂಖ್ಯರ ವಾದ ಸ್ವಾಮೀಜಿಯವರಿಗೆ ಬಹಳವಾಗಿ ಹಿಡಿಸಿತು. "ಆಧುನಿಕ ಭೌತಶಾಸ್ತ್ರದ ಸಂಶೋಧನೆಗಳು ಇದನ್ನೇ ತಾನು ಹೇಳುವುದು! ಕಪಿಲ ಮಹರ್ಷಿ ಈ ಸತ್ಯವನ್ನು ಬಹಳ ಹಿಂದೆಯೇ ಪ್ರತಿಪಾದಿಸಿದ" ಎನ್ನುತ್ತಾರೆ ಸ್ವಾಮೀಜಿ. ಸಾಂಖ್ಯರ ಪ್ರಕಾರ ಮನಸ್ಸು ಕೂಡ ಮಣ್ಣಿನ ಮುದ್ದೆಯಂತೆ ಜಡ. ಅದಕ್ಕೆ ತನ್ನದೇ ಆದ ಬೆಳಕು ಇರುವುದಿಲ್ಲ. ಈ ಬುದ್ಧಿ ಮನಸ್ಸುಗಳು ಬೆಳಗಬೇಕಾದರೆ ಅದರ ಹಿಂದೆ ಯಾವುದೋ ಮತ್ತೊಂದು ಇರಲೇಬೇಕು. ಸಾಂಖ್ಯರು ಇದನ್ನೇ 'ಪುರುಷ' ಎಂದು ಗುರುತಿಸುತ್ತಾರೆ. ಪುರುಷ ವಸ್ತುವಲ್ಲ, ಇವನು ಚೈತನ್ಯಮಯ. ಕಪಿಲ ಮುನಿಯ ಪ್ರಕಾರ ಇರುವುದು ಒಂದೇ ಪುರುಷನಲ್ಲ, ಅಸಂಖ್ಯಾತ ಪುರುಷರಿದ್ದಾರೆ. ಪ್ರಕೃತಿಯ ನೆರಳು ಪುರುಷನ ಮೇಲೆ ಬೀಳುತ್ತದೆ. ಆದರೆ ಬೆಳಗುವ ಸೂರ್ಯನಿಗೆ ಆ ಬೆಳಕನ್ನು ನೋಡುವ ಕಣ್ಣಿನ ದೋಷ ಹೇಗೆ ತಟ್ಟಲಾರದೋ, ಹಾಗೆಯೇ ಪುರುಷನಲ್ಲಿ ಪ್ರಕೃತಿಯ ಏರಿಳಿತಗಳು ಯಾವ ಬದಲಾವಣೆಗಳನ್ನೂ ತರುವುದಿಲ್ಲ.

ಹೀಗೆ ಸಾಂಖ್ಯವನ್ನು ವಿವರಿಸಿದ ಮೇಲೆ ಸ್ವಾಮೀಜಿಯವರು ಕೆಲವು ಪ್ರಶ್ನೆಗಳನ್ನು ಕೇಳುತ್ತಾರೆ. ಮೊದಲನೆಯದಾಗಿ, ಈ ಪ್ರಕೃತಿಯನ್ನು ಸೃಷ್ಟಿಸಿದವರಾರು? ಸಾಂಖ್ಯರನ್ನು ಕೇಳಿದರೆ ಅವರು

ಹೀಗೆ ಹೇಳುತ್ತಾರೆ: ಈ ಪ್ರಕೃತಿ ಮತ್ತು ಪುರುಷರನ್ನು ಯಾರೂ ಸೃಷ್ಟಿಸಿಲ್ಲ. ಅವು ಸರ್ವವ್ಯಾಪಿಯಾಗಿ ಸದಾಕಾಲವೂ ಇವೆ. ಈ ಸಂದರ್ಭದಲ್ಲಿ ಎದುರಾಗುವ ದ್ವಂದ್ವ ಏನೆಂದರೆ, ಎರಡು 'ಅನಂತ'ಗಳು ಇರಲು ಹೇಗೆ ಸಾಧ್ಯ ಎನ್ನುವುದು. ವೇದಾಂತ ಈ ಸಮಸ್ಯೆಯನ್ನು ಬಗೆಹರಿಸುತ್ತದೆ ಎನ್ನುತ್ತಾರೆ ಸ್ವಾಮೀಜಿ. ಸಾಂಖ್ಯಶಾಸ್ತ್ರವು ಹೆಚ್ಚುಕಡಿಮೆ ಪೂರ್ತಿಯಾಗಿ ಕಟ್ಟಿರುವ ಮನೆಯ ಹಾಗೆ. ಕೊನೆಯ ಕೆಲವು ಕುಸುರಿ ಕೆಲಸಗಳನ್ನು ಮಾಡಿ ಮುಗಿಸಿದರೆ ಮನೆ ಪೂರ್ಣವಾದಂತೆ ಎನ್ನುತ್ತಾರೆ ಸ್ವಾಮೀಜಿ. ವೇದಾಂತದ ಒಬ್ಬನೇ ಪುರುಷ ಅಥವಾ ಏಕಮೇವ ಬ್ರಹ್ಮದ ಕಲ್ಪನೆಯು ಸಾಂಖ್ಯರ ಅನೇಕ ಪುರುಷರ ಕಲ್ಪನೆಗಿಂತ ಹೆಚ್ಚು ಸಮರ್ಪಕ ಎಂಬುದು ಸ್ವಾಮೀಜಿಯವರ ಅಭಿಮತ.

## ಜರ್ಮನ್ ತತ್ತ್ವಶಾಸ್ತ್ರಜ್ಞರ ಚಿಂತನೆಗಳು ಹಾಗೂ ಸ್ವಾಮಿ ವಿವೇಕಾನಂದರು

ಆರ್ಥರ್ ಶೋಪನ್‌ಹೆವರ್ ಜರ್ಮನಿಯ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ. ಇವನ ಕಾಲಮಾನ ೧೭೮೮ ರಿಂದ ೧೮೬೦. ಭಾರತದ ಉಪನಿಷತ್ತುಗಳಿಂದ ಬಹಳವಾಗಿ ಪ್ರಭಾವಿತನಾದ ಶೋಪನ್‌ಹೆವರ್ ಉಪನಿಷತ್ತುಗಳು ಮನುಷ್ಯನ ಅತ್ಯಂತ ಉಚ್ಚಮಟ್ಟದ ವಿವೇಕದಿಂದ ಮೂಡಿದ ಕೃತಿಗಳು ಎನ್ನುತ್ತಾನೆ. ಶೋಪನ್‌ಹೆವರ್‌ಗೆ ಸಂಸ್ಕೃತ ಬರದೇ ಇದ್ದುದರಿಂದ, ಉಪನಿಷತ್ತುಗಳ ಲ್ಯಾಟಿನ್ ಅನುವಾದವನ್ನು ಓದಿಯೇ ಅವನು ತೃಪ್ತಿಪಟ್ಟುಕೊಳ್ಳಬೇಕಾಯಿತು. ಔರಂಗಜೇಬನ ಮಗ ದಾರಾಶಿಖೊ ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಅನುವಾದ ಮಾಡಿಸಿದ್ದ. ಇವನ್ನು ಲ್ಯಾಟಿನ್ ಭಾಷೆಗೆ ಅನುವಾದ ಮಾಡಲಾಯಿತು. ಶೋಪನ್‌ಹೆವರ್‌ಗೆ ಉಪನಿಷತ್ತುಗಳು ಕೇವಲ ಜ್ಞಾನದ ಕಣಜಗಳಷ್ಟೇ ಆಗಿರಲಿಲ್ಲ, ಅವನು ಆಗಾಗ ಹೇಳುತ್ತಿದ್ದ ಮಾತು ಎಂದರೆ, "ಉಪನಿಷತ್ತುಗಳು ನನ್ನ ಬದುಕಿನಲ್ಲೂ – ನನ್ನ ಸಾವಿನಲ್ಲೂ ನನಗೆ ನೆಮ್ಮದಿಯನ್ನು ನೀಡಿವೆ" ಎಂದು. ಶೋಪನ್ ಹೆವರ್ ಪ್ರತಿದಿನ ಮಲಗುವ ಮುನ್ನ ಉಪನಿಷತ್ತುಗಳನ್ನು ಓದುತ್ತಿದ್ದನಂತೆ. ಛಾಂದೋಗ್ಯ ಉಪನಿಷತ್ತಿನ ಮಹಾವಾಕ್ಯ 'ತತ್ ತ್ವಮ್ ಅಸಿ' ಅವನ 'The World as Will and Representation' ಎಂಬ ಮೇರುಕೃತಿಯಲ್ಲಿ ಪದೇ ಪದೇ ಕಂಡು ಬರುತ್ತದೆ.

ಶೋಪನ್‌ಹೆವರ್ ಇಡೀ ಜಗತ್ತಿನ ಅಸ್ತಿತ್ವವನ್ನು 'ವಿಲ್' ಪರಿಕಲ್ಪನೆಯನ್ನು ಆಧರಿಸಿ ಪ್ರತಿಪಾದಿಸುತ್ತಾನೆ. ಅವನ ಪ್ರಕಾರ ಜಗತ್ತು ಎಂಬುದು ಮನುಷ್ಯನಲ್ಲಿ ನಾವು ಗುರುತಿಸುವ 'ವಿಲ್' ಅಲ್ಲದೆ ಬೇರಲ್ಲ. ಈ ಪ್ರತಿಪಾದನೆಯನ್ನು ಸ್ವಾಮೀಜಿ ಒಪ್ಪುವುದಿಲ್ಲ. ಎರಡು ಘಟಕಗಳ ನಡುವೆ ನಡೆಯುವ ಪರಸ್ಪರ ಕ್ರಿಯೆ–ಪ್ರತಿಕ್ರಿಯೆಗಳ ಫಲವಾಗಿ ಮಾತ್ರ 'ವಿಲ್' ಎಂಬುದು ಹುಟ್ಟಬಲ್ಲದು. ಎಂದರೆ 'ವಿಲ್' ಎನ್ನುವುದು ಹುಟ್ಟುವ ಮೊದಲೆ ಇದಕ್ಕೆ ಕಾರಣವಾದ ಮೂಲವಸ್ತುಗಳು ಇದ್ದೇ ಇವೆ ಎಂದು ಇದರ ಅರ್ಥ. ಹೀಗಿರುವಾಗ 'ವಿಲ್' ಎಂಬುದು ನಿರಪೇಕ್ಷವಾದದ್ದು ಎಂದು ಹೇಳಲು ಹೇಗೆ ಸಾಧ್ಯ? ವಿಲ್ ಎಂಬುದು ಸಂಯುಕ್ತ ವಸ್ತು. ಅದು ದೇಶಕಾಲಗಳ ತೆಕ್ಕೆಯಲ್ಲಿ, ಕಾರ್ಯಕಾರಣದ ಸರಣಿಯಲ್ಲಿ ರೂಪುಗೊಂಡ ಉತ್ಪನ್ನ ಎಂದು ಭಾವಿಸುವುದಾದರೆ ಈ 'ವಿಲ್' ಎಂಬುದು ನಿರಪೇಕ್ಷ ಸತ್ಯ ಹೇಗಾದೀತು ಎಂದು ಸ್ವಾಮೀಜಿ ಪ್ರಶ್ನಿಸುತ್ತಾರೆ.

ಸ್ವಾಮೀಜಿ ಹೇಳುತ್ತಾರೆ, ನಮ್ಮ ಆಲೋಚನೆಗಳನ್ನೆಲ್ಲ ಸ್ಥಗಿತಗೊಳಿಸಿದರೆ ಆಗ ನಾವು ಈ ವಿಚಾರಗಳಿಗೆ ಅತೀತರಾಗಿರುವುದಾಗಿ ನಮಗೆ ತಿಳಿಯುತ್ತದೆ ಎಂದು. 'ನೇತಿ, ನೇತಿ' – 'ಇದಲ್ಲ, ಇದಲ್ಲ' ಎಂಬ ಮಾರ್ಗದಿಂದ ಈ ಸ್ಥಿತಿಯನ್ನು ತಲುಪಬಹುದು. ಸಕಲ ವಿದ್ಯಮಾನಗಳನ್ನೂ 'ಇದಲ್ಲ' ಎಂದು ತಿರಸ್ಕರಿಸಿದರೆ ಏನು ಉಳಿಯುತ್ತದೊ, ಅದು ಅದೇ ಆಗಿರುತ್ತದೆ. ಅದನ್ನು ವರ್ಣಿಸಲು ಸಾಧ್ಯವಿಲ್ಲ, ಅದು ಅವ್ಯಕ್ತವಾಗಿಯೇ ಉಳಿಯುತ್ತದೆ. ವ್ಯಕ್ತವಾಗುವುದು ಎಂದರೆ ಅದು ಎರಡರ ಸಂಯೋಜನೆಯ ಉತ್ಪನ್ನ. 'ವಿಲ್' ಕೂಡ ಹೀಗೆಯೇ. ಅದೊಂದು ಸಂಯುಕ್ತ. ಹಾಗಾಗಿ ಅದು ಸಾಪೇಕ್ಷ ವಲಯಕ್ಕೇ ಸೀಮಿತ.

## ಉಪಸಂಹಾರ

ಸ್ವಾಮಿ ವಿವೇಕಾನಂದರು ಎಲ್ಲವನ್ನೂ ಸಂಪೂರ್ಣವಾಗಿ ಅರ್ಥಮಾಡಿಕೊಂಡು ನಿಷ್ಪಕ್ಷಪಾತವಾಗಿ ವಿವರಿಸಬಲ್ಲವರಾಗಿದ್ದರು. ಅವರು ಖುರಾನ್ ಅನ್ನೂ ಸಹ ಚೆನ್ನಾಗಿ ಅರಿತಿದ್ದರು. ಒಮ್ಮೆ ಲಂಡನ್ನಿನಲ್ಲಿ ನಡೆದ ಚರ್ಚೆಯೊಂದರಲ್ಲಿ ಅವರು ಭಾಗವಹಿಸಬೇಕಾಗಿಬಂತು. ಕ್ರಿಶ್ಚಿಯನ್ ಧರ್ಮದ ಪ್ರತಿಪಾದಕನೊಬ್ಬ, ಖುರಾನ್ ಸ್ತ್ರೀಯರಿಗೆ ಆತ್ಮವೇ ಇಲ್ಲ ಎಂದು ಹೇಳುತ್ತದೆ ಎಂದು ಅದನ್ನು ಖಂಡಿಸಿದ. ಸ್ವಾಮೀಜಿಯವರು ಇದಕ್ಕೆ ಪ್ರತಿಯಾಗಿ, "ನಾನು ಮಹಮ್ಮದೀಯನಲ್ಲ, ಆದರೂ ನನಗೆ ಆ ಧರ್ಮವನ್ನು ಅಧ್ಯಯನ ಮಾಡುವ ಅವಕಾಶ ದೊರೆಯಿತು. ಖುರಾನ್ ಎಲ್ಲೂ ಕೂಡ ಸ್ತ್ರೀಯರಿಗೆ ಆತ್ಮವಿಲ್ಲ ಎಂದು ಹೇಳುವುದಿಲ್ಲ; ಬದಲಾಗಿ ಅವರಿಗೆ ಆತ್ಮ ಇದೆ ಎಂದೇ ಹೇಳುತ್ತದೆ" ಎಂದರು.

ವೇದಾಂತವನ್ನೂ ಹೀಗೆ ನಿಷ್ಪಕ್ಷಪಾತವಾಗಿ ವಿಮರ್ಶೆಮಾಡಿ ಅದು ಸತ್ಯಕ್ಕೆ ಅತ್ಯಂತ ಸಮೀಪವಿರುವುದನ್ನು ಸ್ವಾಮಿ ವಿವೇಕಾನಂದರು ಮನಗಂಡರು. ಒಂದು ವೇಳೆ ವೇದಾಂತವನ್ನು ಬೇರೆ ಇನ್ನಾವ ಧರ್ಮವಾದರೂ ಪ್ರತಿಪಾದಿಸಿದ್ದರೆ ನಿಸ್ಸಂದೇಹವಾಗಿ ಅವರು ಅದನ್ನೇ ಎತ್ತಿಹಿಡಿಯುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ. ವೇದಾಂತ ಅವರ ಮಟ್ಟಿಗೆ ಕೇವಲ ವಾದವಾಗಿ ಉಳಿಯಲಿಲ್ಲ. 'ಅನುಷ್ಠಾನ ವೇದಾಂತ' ಎಂಬ ಅವರ ಭಾಷಣದಲ್ಲಿ ದಿನನಿತ್ಯದ ಬದುಕಿನಲ್ಲಿ ವೇದಾಂತವನ್ನು ಅಳವಡಿಸಿಕೊಳ್ಳುವ ಸಾಧ್ಯತೆಯನ್ನು ಸ್ವಾಮಿ ವಿವೇಕಾನಂದರು ಎತ್ತಿಹಿಡಿಯುತ್ತಾರೆ.

ನಮ್ಮ ಗಡಿಬಿಡಿಯ ಬದುಕಿನಲ್ಲೂ ವೇದಾಂತ ಸಾರುವ ಏಕತೆಯನ್ನು ತೊಡಗಿಸಿಕೊಂಡರೆ ನಮ್ಮ ಕೆಲಸಗಳು ಹೆಚ್ಚು ಸುಗಮವಾಗಿಯೂ ಪರಿಣಾಮಕಾರಿಯಾಗಿಯೂ ಆಗುತ್ತದೆಂದು ಅವರ ಅಭಿಪ್ರಾಯ. ನಮ್ಮೊಳಗಿನ ಏಕಮಾತ್ರ 'ಸತ್ಯ' ಎಂದರೆ ಸಕಲ ಚರಾಚರಗಳನ್ನೂ ಒಂದುಗೂಡಿಸುವ ಏಕತೆ. ಈ ಸತ್ಯವನ್ನೇ ನಾವು ಬದುಕಿನ ಅಖಾಡಕ್ಕೆ ಇಳಿಸಿದರೆ ಸಾಕು, ಉಳಿದ ಯಾವುದರ ಬಗ್ಗೆಯೂ ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಇದೇ ಎಲ್ಲ ವಾದಗಳ ತಿರುಳು.

# ಭಾರತದ ಯುವಜನತೆಗೆ ಸ್ವಾಮಿ ವಿವೇಕಾನಂದರ ಸಮಾಜಸೇವೆಯ ಸಂದೇಶ

**ಭಾರತ ಯುವಕರಿಗೆ ಸ್ವಾಮೀಜಿ ವ್ಯಕ್ತಿಗತ ಮತ್ತು ಸಾಮಾಜಿಕ ಉದ್ಧಾರದ ರಾಜಮಾರ್ಗವೊಂದನ್ನು ಹೇಳಿಕೊಟ್ಟರು. ಅದೇ 'ಸೇವೆ' ಮತ್ತು 'ತ್ಯಾಗ'ದ ಮಾರ್ಗ. ತಮ್ಮ ಅನುಭವದ ದೃಷ್ಟಿಯಿಂದ ಈ ಸಂದೇಶದ ಅನುಷ್ಠಾನದ ಹಲವು ಆಯಾಮಗಳನ್ನು ತಿಳಿಸಿ ಕೊಟ್ಟಿರುವ ಲೇಖಕರು ಸ್ವಾಮಿ ವಿವೇಕಾನಂದರ ಆದರ್ಶಗಳ ಬೆಳಕಿನಲ್ಲಿ ನಡೆಯುತ್ತಿರುವ, 'ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್' ಸೇವಾಸಂಸ್ಥೆಯ ಸಂಸ್ಥಾಪಕರು. ಉತ್ತಮ ವಾಗ್ಮಿಗಳು, ಪತ್ರಿಕಾ ಅಂಕಣಕಾರರೂ ಆಗಿರುವ ಇವರು ಹಲವಾರು ದೇಶಗಳಿಗೆ ಭೇಟಿಕೊಟ್ಟಿದ್ದಾರೆ.**



**ಡಾ. ಆರ್. ಬಾಲಸುಬ್ರಹ್ಮಣ್ಯಂ**

**ಯೌ**ವನವು ಅಪರಿಮಿತ ಶಕ್ತಿ ಇರುವ, ಮಾನವನ 'ಸೃಜನಶೀಲತೆ' ಹಾಗೂ 'ಅದಮ್ಯ ಚೇತನ'ಗಳು ಉತ್ತುಂಗದಲ್ಲಿರುವ ಒಂದು ಅದ್ಭುತವಾದ ಘಟ್ಟ. ಪ್ರತಿದಿನ ನಮ್ಮ ಸುತ್ತಲೂ ಅನೇಕ ರಂಗಗಳಲ್ಲಿ ವಿಧವಿಧವಾದ ಸಾಧನೆಗಳನ್ನು ಮಾಡಿದ ನೂರಾರು ಯುವಕರ ಬಗ್ಗೆ ಕೇಳುತ್ತೇವೆ ಹಾಗೂ ನೋಡುತ್ತೇವೆ. ಮಾನವ ಸಂಪನ್ಮೂಲದ ದೃಷ್ಟಿಯಿಂದ ನೋಡಿದರೆ ಭಾರತಕ್ಕೆ ಇದು ಅತ್ಯಂತ ಪ್ರಶಸ್ತವಾದ ಕಾಲ. ನಮ್ಮ ದೇಶದ ಶೇ. ೭೮ ರಷ್ಟು ಜನ ೪೦ ವರ್ಷಕ್ಕಿಂತ ಕೆಳಮಟ್ಟದವರಾಗಿದ್ದಾರೆ. ಇವರಲ್ಲಿರುವ ಅಗಾಧ ಶಕ್ತಿಯನ್ನು ಊಹಿಸಿಕೊಂಡರೆ, ಒಂದು ದೇಶವಾಗಿ ನಾವು ಎಂತಹ ಸವಾಲನ್ನಾದರೂ ಮೆಟ್ಟಿ ನಿಲ್ಲಬಲ್ಲೆವು ಎಂದೆನಿಸುತ್ತದೆ. ಆದರೆ ಭಾರತವನ್ನು ಪ್ರಪಂಚದ ಅತ್ಯಂತ ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿ (ಆರ್ಥಿಕವಾಗಿ ಅಷ್ಟೇ ಅಲ್ಲ) ನಿಲ್ಲಿಸಬಲ್ಲ ಸಾಮರ್ಥ್ಯವಿರುವ ಈ ಶಕ್ತಿಯನ್ನು ನಾವು ಅರ್ಥೈಸಿಕೊಂಡಿದ್ದೇವೆಯೇ?

ಯೌವನವು ಮನಸ್ಸು ಅನೇಕ ರೀತಿಯ ಪ್ರಭಾವಗಳಿಗೆ ಒಳಗಾಗುವ ಕಾಲ ಹಾಗೂ ನಮ್ಮ ಆದರ್ಶಗಳು ನಮ್ಮ ಕೆಲಸ ಕಾರ್ಯಗಳ ದಿಕ್ಕನ್ನು ನಿರ್ಧರಿಸುವ ಕಾಲ ಕೂಡ ಹೌದು. ಒಬ್ಬ ಆದರ್ಶ ವ್ಯಕ್ತಿಯನ್ನು ಮುಂದಿಟ್ಟುಕೊಂಡು ಅವರಂತೆಯೇ ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತೇವೆ. ಕೆಲಸಗಳು ಎಷ್ಟೇ ಕ್ಲಿಷ್ಟಕರವಾಗಿದ್ದರೂ ಮುಗಿಸಿಯೇ ತೀರುತ್ತೇವೆಂದು ಹೊರಡುತ್ತೇವೆ. ಕೆಲ ವರ್ಷಗಳ ಹಿಂದೆ ಅಂತಾರಾಷ್ಟ್ರೀಯ ಪತ್ರಿಕೆಯೊಂದು, "ಇಷ್ಟು ಅಗಾಧ ಪ್ರಮಾಣದಲ್ಲಿ ಶಿಕ್ಷಿತ ಯುವಜನರಿರುವ ದೇಶ ಬಹುಶಃ ಭಾರತ ಒಂದೇ" ಎಂದು ಬರೆದಿತ್ತು. ಹಾಗೆಯೇ, "ಮುಂಬರುವ ವರ್ಷಗಳಲ್ಲಿ ನಿವೃತ್ತ ಯುವಜನರೂ ಈ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ" ಎಂದೂ ಈ ಪತ್ರಿಕೆ ಬರೆದಿತ್ತು. ನಮ್ಮ ಯುವಜನ ಇಷ್ಟು ಅಗಾಧವಾದ ಸಂಪತ್ತನ್ನು ಸೃಷ್ಟಿಸಬಲ್ಲರು ಎಂಬ ಖುಷಿ ಹೆಮ್ಮೆ ಒಂದೆಡೆಯಾದರೆ, ದುಡ್ಡು ಮಾಡುವುದೊಂದೇ ಇವರ ಏಕೈಕ ಮೌಲ್ಯ ಹಾಗೂ ಉದ್ದೇಶವೇ ಎಂಬ ಪ್ರಶ್ನೆ ಕಾಡದೆ ಇರುವುದಿಲ್ಲ.

ಭಾರತ ಬಹಳ ವೈವಿಧ್ಯ ವೈಪರೀತ್ಯಗಳಿರುವ ದೇಶ. ಇಷ್ಟೊಂದು ಸಂಪತ್ತು ಒಂದೆಡೆ ಇದ್ದರೆ, ಒಪ್ಪತ್ತು ಊಟಕ್ಕೂ ಕಷ್ಟಪಡುವವರು ನಮ್ಮ ನಡುವೆಯೇ ಇದ್ದಾರೆ. ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ ಹಾಗೂ ಬಾಹ್ಯಾಕಾಶ ಕ್ಷೇತ್ರಗಳಲ್ಲಿ ನಮ್ಮ ಸಾಧನೆ ಇತರರು ಅಸೂಯೆಪಡುವಂಥದ್ದಾಗಿದ್ದರೂ, ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಶೇ. ೧೦ ಜನರು ಮಾತ್ರವೇ ಶೌಚದ ವ್ಯವಸ್ಥೆಯನ್ನು ಹಾಗೂ ಕೇವಲ ಶೇ. ೨೨ ರಷ್ಟು ಜನರು ಮಾತ್ರವೇ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿದ್ದಾರೆಂಬ ಸಂಗತಿ ನೋವು ತರುವಂಥದ್ದು. ಇವತ್ತಿಗೂ ಶೇ. ೪೨ ರಷ್ಟು ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿ ತಮ್ಮ ಕುಟುಂಬದ ಅಗತ್ಯತೆಗಳನ್ನು ಪೂರೈಸಲು ಹೊಲ ಕಾರ್ಖಾನೆಗಳಲ್ಲಿ ದುಡಿಯುವ ಅನಿವಾರ್ಯತೆ ಹೊಂದಿದ್ದಾರೆ. ಜಗತ್ತಿನ ಎಲ್ಲೆಡೆ ತಾಂತ್ರಿಕ ಹಾಗೂ ತಂತ್ರಾಂಶ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಸಮರ್ಥರಾಗಿರುವ ನಾವು, ನಮ್ಮ ದೇಶದ ಬಡತನವನ್ನು ನೀಗಿಸಲು ಹೆಣಗಾಡುತ್ತಿದ್ದೇವೆ. ಕ್ರೀಡೆ,

ಸಂಗೀತ, ಸಾಹಿತ್ಯ, ತಾಂತ್ರಿಕತೆ, ಹಣಗಳಿಕೆ – ಈ ಎಲ್ಲ ಕ್ಷೇತ್ರಗಳಲ್ಲಿ ನಮ್ಮಲ್ಲಿ ಯುವ ಸಾಧಕರಿದ್ದರೂ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿದೆ. ನಮ್ಮ ದೇಶದ ಜಟಿಲ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಹುಡುಕುವುದು ಸವಾಲೇ ಸರಿ. ಈ ಸವಾಲನ್ನು ಮೆಟ್ಟಿ ನಿಲ್ಲಲು ನಮ್ಮಲ್ಲಿ ಹೊಸ ದೃಷ್ಟಿಕೋನ, ಚೈತನ್ಯ, ದೂರದರ್ಶಿತ್ವ ಹಾಗೂ ಅಸಾಧಾರಣ ಪ್ರಯತ್ನದ ಆವಶ್ಯಕತೆ ಇದೆ. ಇವೆಲ್ಲ ನಮ್ಮ ದೇಶದ ಯುವಜನತೆಗೆ ಅಸಾಧ್ಯವೇನಲ್ಲ. ಆದರೂ ಈ ವಿಚಾರಗಳು ಅವರ ಆದ್ಯತೆಯ ಪಟ್ಟಿಯಲ್ಲಿ ಎಲ್ಲಿವೆಯೋ ತಿಳಿಯದು. ಭೋಗಲಾಲಸೆಯ ಪ್ರಪಂಚದಲ್ಲೇ ಗಿರಕಿ ಹೊಡೆಯುತ್ತಿರುವ ಈಗಿನ ಯುವಜನತೆಗೆ 'ರಾಷ್ಟ್ರನಿರ್ಮಾಣ' ಕೂಡ ತಮ್ಮ ಜೀವಿತಾವಧಿಯ ಪ್ರಮುಖ ಭಾಗ ಎಂದು ಹೇಗೆ ತಿಳಿಹೇಳುವುದು? ಈ 'ಪವಿತ್ರ' ಕಾರ್ಯಕ್ಕೆ ಅವರನ್ನು ತೊಡಗಿಸುವುದಾದರೂ ಹೇಗೆ? ಇದಕ್ಕೆ ಮೊದಲ ಹಂತವಾಗಿ ಯುವಜನತೆಯನ್ನು ಹಾಗೂ ನಾವು ವಾಸಿಸುವ ಪರಿಸರವನ್ನು ಅಧ್ಯಯನ ಮಾಡಿ ಅರ್ಥಮಾಡಿಕೊಳ್ಳಬೇಕು.



ಭಾರತದಲ್ಲಿ ಜನರು ಹಿಂದಿನಿಂದಲೂ ತಮ್ಮ ನಡುವಿರುವ ಸಾಧಕರನ್ನು ಹಾಗೂ ಗಣ್ಯವ್ಯಕ್ತಿಗಳನ್ನು ವೈಭವೀಕರಿಸಿ ಆರಾಧ್ಯದೈವಗಳಂತೆ ನೋಡುತ್ತಾ ಬಂದಿದ್ದಾರೆ. ವೇದದ ಕಾಲದಲ್ಲಿ 'ಜ್ಞಾನ'ವೇ ಪ್ರಧಾನವಾಗಿದ್ದುದರಿಂದ ಋಷಿಮುನಿಗಳನ್ನು ಉನ್ನತ ಸ್ಥಾನದಲ್ಲಿಟ್ಟು ಗೌರವಿಸುತ್ತಿದ್ದರು. ರಾಜ ಮಹಾರಾಜರೂ ಕೂಡ ಅವರಿಗೆ ತಲೆಬಾಗುತ್ತಿದ್ದರು. ವಿಶ್ವಾಮಿತ್ರನಂತಹ ರಾಜನೂ ಸಹ 'ರಾಜರ್ಷಿ'ಯಾಗಲು ಹಂಬಲಿಸಿದ. ತದನಂತರದ ಕಾಲದಲ್ಲಿ ಜನ 'ಶೌರ್ಯ'ಕ್ಕೆ ಪ್ರಾಧಾನ್ಯತೆ ಕೊಟ್ಟರು. ಮಹಾಭಾರತದ ಕಾಲದಲ್ಲಿ 'ಕ್ಷತ್ರಿಯ' ಹಾಗೂ ಅವನ 'ಶೌರ್ಯ'ಕ್ಕೆ ಜನ ಮನಸೋತು ಅನುಕರಿಸಬಯಸಿದರು. ಕರ್ಣ ಹಾಗೂ ಏಕಲವ್ಯನಂಥವರು ಬಿಲ್ವಿದ್ಯೆಯನ್ನು ಹಾಗೂ ಅಸ್ತ್ರಶಾಸ್ತ್ರಗಳ ಜ್ಞಾನವನ್ನು ಪಡೆಯಲು ಪರಿತಪಿಸಿದ ಕಥೆಗಳು ನಮಗೆಲ್ಲರಿಗೂ ಗೊತ್ತು. ಬ್ರಾಹ್ಮಣರಾದ ದ್ರೋಣಾಚಾರ್ಯ ಹಾಗೂ ಕೃಪಾಚಾರ್ಯರಂಥವರು ತಮ್ಮ ಸಾಂಪ್ರದಾಯಿಕ ಜ್ಞಾನಾರ್ಜನೆಯನ್ನು ಬದಿಗಿಟ್ಟು, ಯುದ್ಧಶಾಸ್ತ್ರದಲ್ಲಿ ತರಬೇತಿ ನೀಡುವ ಮೂಲಕ ಗುರುಗಳಾದರು.



ಕಾಲಚಕ್ರ ಉರುಳುತ್ತಾ ಹೋದಂತೆ ಶೌರ್ಯಕ್ಕೆ ಬದಲಾಗಿ 'ರಾಷ್ಟ್ರೀಯತೆ' ಹಾಗೂ 'ದೇಶಭಕ್ತಿ' ಪ್ರಧಾನ ಮೌಲ್ಯಗಳಾದವು. ಇದು ಬ್ರಿಟಿಷರು ನಮ್ಮನ್ನಾಳಿದ ಕಾಲ. ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುವುದು ತಮ್ಮ ಆದ್ಯ ಹಾಗೂ ಪೂಜ್ಯ ಕರ್ತವ್ಯ ಎಂದು ಸಾಮಾನ್ಯ ಜನರೂ ಭಾವಿಸಿದರು. ಭಗತ್‌ಸಿಂಗ್‌ನಿಂದ ಹಿಡಿದು ಸುಭಾಷ್‌ಚಂದ್ರಬೋಸ್ ಹಾಗೂ ಗಾಂಧೀಜಿಯವರೆಗೆ ಎಲ್ಲರೂ ಬ್ರಿಟಿಷರ ಕಪಿಮುಷ್ಟಿಯಿಂದ ತಾಯ್ನಾಡನ್ನು ವಿಮುಕ್ತಿಗೊಳಿಸಲು ಹೋರಾಡಿದರು. ಇವತ್ತು ಸ್ವಾತಂತ್ರ್ಯಾನಂತರದ ಭಾರತದ ಮೌಲ್ಯ ವ್ಯವಸ್ಥೆಯೇ ಬೇರೆ. ನಮ್ಮದು 'ಜ್ಞಾನಾಧಾರಿತ' ಸಮಾಜವೆಂದು ಹೇಳಿಕೊಂಡರೂ ಆ ಜ್ಞಾನದಿಂದ 'ಅರ್ಥ' ಸಂಪಾದನೆಯೇ ಪ್ರಾಧಾನ್ಯವಾಗಿಬಿಟ್ಟಿದೆ. ದುರಂತವೆಂದರೆ, ಸಂಪಾದನೆಯ ಹಾದಿಯಲ್ಲಿ ಶುದ್ಧಹಸ್ತ ಅನುಕರಣೀಯ ವ್ಯಕ್ತಿಗಳು ಕೆಲವರಿದ್ದರೆ, ವಾಮಮಾರ್ಗಾಚಾರ್ಯರೇ ಹೆಚ್ಚಾಗಿಬಿಟ್ಟಿದ್ದಾರೆ. ಸಂಪತ್ತು ಸೃಷ್ಟಿಸುವುದು (ಅಥವಾ ದುಡ್ಡು ಮಾಡುವುದು) ಖಂಡಿತ ತಪ್ಪಲ್ಲ. ಆದರೆ ನನ್ನ ತಕರಾರಿರುವುದು ಅದಕ್ಕೆ ಅನುಸರಿಸುವ ಮಾರ್ಗದ ಬಗ್ಗೆ. 'ಮಾರ್ಗ'ಕ್ಕಿಂತ 'ಅಂತ್ಯ'ವೇ ಮುಖ್ಯವಾದಾಗ ಮೊದಲು ಬಲಿಯಾಗುವುದು 'ಮೌಲ್ಯ'ಗಳು. ಒರಟು ಉಪಭೋಗಿತನ ಹಾಗೂ ಮಾನವನ ಅಸ್ತಿತ್ವದ ವಾಣಿಜ್ಯೀಕರಣ – ಇವೆರಡೂ ಇಂದು ಭಯಂಕರ ವಾತಾವರಣವನ್ನು ಸೃಷ್ಟಿಮಾಡಿಬಿಟ್ಟಿವೆ. ನಮ್ಮ ಯುವಜನತೆ 'ಸಂಪಾದನೆ'ಯ ಅಳತೆಗೋಲಿನಿಂದ ತಮ್ಮ ಅಸ್ತಿತ್ವ ಹಾಗೂ ಯಶಸ್ಸನ್ನು ಅಳೆಯುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ. ಈ ಹಿನ್ನೆಲೆಯಲ್ಲಿ ಅವರನ್ನು 'ಸಾಮಾಜಿಕ ವಾಣಿಜ್ಯೋದ್ಯಮಿ'ಗಳನ್ನಾಗಿ ಪರಿವರ್ತಿಸಿ, ನಮ್ಮ ದೇಶದ ಅಸಂಖ್ಯಾತ ಬಡವರ / ಅವಕಾಶವಂಚಿತರ / ಪ್ರತಿಕೂಲ ಸ್ಥಿತಿಯಲ್ಲಿರುವವರ ಶ್ರೇಯೋಭಿವೃದ್ಧಿಗಾಗಿ ದುಡಿಯುವಂತೆ ಪ್ರೇರೇಪಿಸುವುದು ಅತ್ಯಂತ ದೊಡ್ಡ ಸವಾಲೇ ಸರಿ. ಸೃಷ್ಟಿಸಿದ ಸಂಪತ್ತನ್ನು ಸಮಾಜದ ಒಳಿತಿಗೆ ಬಳಸುವುದರಲ್ಲೇ ಸುಖವಿದೆ ಎಂದು ನಮ್ಮ ಯುವಜನತೆ ಮನಗಾಣಬೇಕು. ಯೋಚಿಸುತ್ತಾ ಹೋದಂತೆ, ಸ್ವಾಮಿ ವಿವೇಕಾನಂದರು ನೂರು ವರ್ಷಗಳ ಹಿಂದೆಯೇ ಯುವಜನರನ್ನು ಕುರಿತು ಹೇಳಿದ ಸಿಂಹನುಡಿಗಳೇ ಈ ಕ್ಲೇಶಗಳಿಗೆಲ್ಲಾ ಸೂಕ್ತ ಪರಿಹಾರೋಪಾಯ ಎಂದು ನನಗೆ ಮನದಟ್ಟಾಗುತ್ತಿದೆ.